Declaration of Oath in Connection with Issue of Caste Certificate ?

423 SRI M. GANGANNA (Kustagi).—Will the Minister for Social Welfare and Backward Classes be pleased to state.

(a) the castes and communities that were included as Scheduled Castes and Scheduled Tribes as per the Constitution' at the time of General Elections of Karnataka Legislative Assembly during 1952, 1957 and 1978 (Copies of the orders published in this regard to be furnished) ;

(b) the Central Government after obtaining Concurrence of Parliament duly effecting necessary amendments to the 'Constitution' has brought into force some castes and Communities under the Scheduled Castes/Scheduled Tribes Tag, based on the recommendations and advise of the State Government and after verification of all the records relating to their way of life and habitation ; whether it is a fact that the State Government has issued a Notification (without Consulting Central Government) for inclusion some Communities as Scheduled Tribes and they are eligible for giving 'Declaration of Oath' in connection with issue of Caste Certificates ;

(c) the reasons for not issuing a similar Notification Permitting Scheduled Castes pe ple to give 'Declaration of Oath' in connection with issue of Caste Certificates ?

SRI P.VENKATARAMANA (Minister for Social Welfare and Backward Calsses).—

(a) The lists of castes and communities which were included to the Scheduled Castes and the Scheduled Tribes, published in Constitution (the Scheduled Caste and Schedule Tribes) Order 1950 and the Scheduled Castes and Scheduled Tribes Order (Amendment) Act, 1976, is laid on the Table of the House.

(b) No.

(c) Does not arise.

ಶ್ರೀ ಎಂ. ಗಂಗಣ್ಣ.—ಪರಿಶಿಷ್ಟ ಪಂಗಡಕ್ಕೆ ಸೇರಿದವನೆಂದು ಜಾತಿಯ ಸರ್ಟಿಫಿಕೇಟ್ ತೆಗೆದು ಕೊಳ್ಳುವ ಬಗ್ಗೆ ಸರ್ಕಾರದಿಂದ ಒಂದು ಸುತ್ತೋಲೆಯನ್ನು ಪ್ರಕಟಿಸಿರುವುದು ನಿಜವೇ ? ಎಂದು ನಾನು ಕೇಳಿರುವ ಪ್ರಶ್ನೆಗೆ ''ಇಲ್ಲ'' ಎಂದು ತಾವು ಉತ್ತರ ಕೊಟ್ಟಿದ್ದೀರಿ. ತಾ. ೨೪-೬-೧೯೮೧ ರಂದು ಸರ್ಕಾರದವರು ಒಂದು ಸರ್ಕ್ಯುಲರ್ ಹೊರಡಿಸಿ ಪೆಡ್ಡೊಲ್ಡ್ ಟ್ರೈಬ್‌ನವರು ಈ ಕೆಳಕಂಡ ಕಂಡೀಷನ್‌ಗಳನ್ನು ಫುಲ್‌ಫಿಲ್ ಮಾಡಬೇಕೆಂದು ತಿಳಿಸಿರುತ್ತೀರಿ. ಹಾಗಾದರೆ ಇಲ್ಲಿ ಸಚಿವರು ಕೊಟ್ಟಿರತಕ್ಕ ಉತ್ತರ ತಪ್ಪಲ್ಲವೇ ?

ಶ್ರೀ ಪಿ. ವೆಂಕಟರಮಣ.—ತಾ. ೨೪-೬-೧೯೮೧ ಕೊಟ್ಟಿರುವುದು ಸರ್ಕ್ಯುಲರ್ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಸರ್ಕ್ಯುಲರ್ ಅಲ್ಲಿ. ನಾವು ಕೊಟ್ಟಿರುವುದು ಕ್ಲಾರಿಫಿಕೇಷನ್ ಮಾತ್ರ. ಎಸ್.ಸಿ. ಎಂದರೆ ಯಾರು ? ಎಸ್.ಟಿ. ಎಂದರೆ ಯಾರು ? ಅವರಿಗೆ ಸರ್ಟಿಫಿಕೇಟ್ ಕೊಡಬೇಕಾದರೆ ನಾವು ಎಷ್ಟು ಎಚ್ಚರಿಕೆಯಿಂದ ಇರಬೇಕೆಂದು ಗೈಡ್‌ಲೈನ್ಸ್ ಕೊಟ್ಟಿದ್ದೇವೆ ಅಷ್ಟೆ. ಮಾನ್ಯ ಸದಸ್ಯರು ದಯವಿಟ್ಟು ಅದನ್ನು ಸರಿಯಾಗಿ ತಿಳಿದುಕೊಳ್ಳಬೇಕಂ.

ಶ್ರೀ ಎಂ. ಗಂಗಣ್ಣ —ಎಸ್.ಸಿ. ಯವರಿಗೆ ಇಂಥ ಆದೇಶ ಏನೂ ಇಲ್ಲ. ಆದರೆ ಎಸ್.ಟಿ. ಯವರು ಮಾತ್ರ ಇಂಥ ಕಂಡೀಷನ್ಸ್‌ನ್ನು ಪುಲ್‌ಫಿಲ್ ಮಾಡಬೇಕಾಗಿದೆ. ಈ ರೀತಿ ತಾರತಮ್ಯ ಮಾಡುವುದಕ್ಕೆ ಕಾರಣವಾದರೂ ಏನು ?

ಶ್ರೀ ಪಿ. ವೆಂಕಟರಮಣ.—ಎಸ್.ಟಿ.ನವರಿಗೂ ವಿಶೇಷ ಸೌಲಭ್ಯಗಳನ್ನು ನಾವು ಕೊಡುತ್ತಿದ್ದೇವೆ. ಆ ಸೌಲಭ್ಯಗಳನ್ನೆಲ್ಲಾ ಪಡೆದುಕೊಳ್ಳುವುದಕ್ಕಾಗಿ ಅನೇಕ ಜನ ಸುಳ್ಳು ಸರ್ಟಿಫಿಕೇಟ್‌ಗಳನ್ನು ಪಡೆಯುತ್ತಿದ್ದರು. ಈ ರೀತಿ ಸರ್ಟಿಫಿಕೇಟ್‌ಗಳನ್ನು ಕೊಡುವವರು ಸ್ಪಷ್ಟವಾಗಿ ವಿಚಾರವನ್ನು ತಿಳಿದುಕೊಂಡಿರಲಿ ಎಂಬ ಉದ್ದೇಶದಿಂದ ನಾವು ಈ ಕ್ಲಾರಿಫಿಕೇಷನ್‌ನ್ನು ಕೊಟ್ಟಿದ್ದೇವೆ. ಇದರಲ್ಲಿ ನಾವು ಯಾರ ತಾರತಮ್ಯವನ್ನೂ ಮಾಡಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ತಹಸೀಲ್ದಾರರೇ ಸರ್ಟಿಫಿಕೇಟ್ ಕೊಡಬೇಕೆಂದು ಭಾರತ ಸರ್ಕಾರದವರ ಸೂಚನೆ ಇದೆ.

ಶ್ರೀ ಎಂ. ಗಂಗಣ್ಣ.—ತಾ. ೨೦-೩-೧೯೮೦ರಲ್ಲಿ ಒಂದು ಸರ್ಕುಲರ್ ಹೊರಡಿಸಿ ಕಲಂ ನಂಬರ್ ೩ರಲ್ಲಿ ಏನು ಸೇರಿಸಿದ್ದೀರಿ ಆ ಜಾತಿಯವರು ಇಪತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಸರ್ಟಿಫಿಕೇಟ್ ತೆಗೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಪಿ ವೆಂಕಟರಮಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಪ್ಪು ತಿಳಿದುಕೊಂಡಿರುವುದರಿಂದ ನನ್ನಲ್ಲಿರತಕ್ಕ ಎರಡು ಸರ್ಕ್ಯುಲರ್‌ಗಳನ್ನೂ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತಿದ್ದೇನೆ. ಮಾನ್ಯ ಸದಸ್ಯರು ನಾವು ಕಳುಹಿಸಿರುವ ಸರ್ಕ್ಯುಲರ್‌ಗಳನ್ನು ತಪ್ಪಾಗಿ ತಿಳಿದುಕೊಂಡು ನೋಟಿಫಿಕೇಷನ್ ಎಂದು ಹೇಳುತ್ತಿದ್ದಾರೆ ಆದು ಸರಿಯಲ್ಲ. ಏಕೆಂದರೆ ಆ ರೀತಿ ನೋಟಿಫಿಕೇಷನ್‌ಗಳನ್ನು ಕಳುಹಿಸುವುದಕ್ಕೆ ನಮಗೆ ಅಧಿಕಾರವೇ ಇಲ್ಲ. On the recommendations of the State Government the Parliament has to approve and Presidents consent obtained before issuing Notification for inclussion of Castes in the list of SCs and STs ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ನಾವು ಮಾಡುವುದಕ್ಕೆ ಅಧಿಕಾರವೇ ಇಲ್ಲ.

ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ, ೨೭ರ ಜುಲೈ ೧೯೭೭ಕ್ಕೆ ಕೇಂದ್ರ ಸರ್ಕಾರದಿಂದ ಬಂತು ಎಂದು ಇದರಲ್ಲೇ ಇದೆ.....

MR. SPEAKER.—Either of you have to understand things properly ತಾವು ಮಾನ್ಯ ಸಚಿವರ ಚೇಂಬರ್‌ಗೆ ಹೋಗಿ ಸ್ಪಷ್ಟವಾಗಿ ವಿಚಾರವನ್ನು ತಿಳಿದುಕೊಳ್ಳುವುದು ಒಳ್ಳೆಯದು ಏಕೆಂದರೆ ನೀವು ಹೇಳುವುದು ಅವರಿಗೆ ಅರ್ಥವಾಗುವುದಿಲ್ಲ ಅವರು ಹೇಳುವುದು ನಿಮಗೆ ಅರ್ಥವಾಗುವುದಿಲ್ಲ. ಪದೇ ಪದೇ ಕೇಳಿದ್ದನ್ನೇ ಕೇಳುತ್ತಿದ್ದೀರಿ. ಅವರೂ ಕೂಡ ಹೇಳಿದ್ದನ್ನೇ ಹೇಳುತ್ತಿದ್ದಾರೆ. ಕಾನ್‌ಸ್ಟಿಟ್ಯೂಷನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಯಾವ ಯಾವ ಜಾತಿಗಳು ಬರುತ್ತವೆ ಎಂಬುದು ಸ್ಪಷ್ಟವಾಗಿದೆ. ಅದನ್ನು ಬೇರೆ ಯಾರಿಗೂ ಕೊಡುವುದಕ್ಕೆ ಅಧಿಕಾರ ಇಲ್ಲ. ಸರ್ಕಾರದವರು ಇದನ್ನು ಕೊಟ್ಟಿದ್ದಾರೆಂದು ನೀವು ಹೇಳುತ್ತಿದೀರಿ. ಒಂದುವೇಳೆ ಹಾಗೆ ಕೊಟ್ಟಿದ್ದರೆ ತಪ್ಪಾಗುತ್ತದೆ. ಆದ್ದರಿಂದ ನೀವು ಮಾನ್ಯ ಮಂತ್ರಿಗಳ ಚೆಂಬರ್‌ಗೆ ಹೋಗಿ ಸ್ಪಷ್ಟವಾಗಿ ವಿಚಾರವನ್ನು ಕೇಳಿ ತಿಳಿದುಕೊಳ್ಳಿ.

SRI GANGANNA.—They should obtain prior permission of the Government of India.

MR. SPEAKER.—Government of India also cannot give permission.

ಅಧ್ಯಕ್ಷರು—ಈ ರೀತಿ ಹೊಸದಾಗಿ ಏನಾದರೂ ಸೇರಿಸಬೇಕಾದರೆ ಅದು ಮೊದಲು ಪಾರ್ಲಿಮೆಂಟ್ ಮುಂದೆ ಬಂದು ಅಲ್ಲಿ ಒಪ್ಪಿಗೆಯಾಗಿ ನಂತರ ರಾಷ್ಟ್ರಪತಿಯವರು ಆರ್ಡರ್ ಮಾಡಬೇಕಾಗುತ್ತದೆ. ಆದರ ನಂತರ ರಾಜ್ಯಾಂಗದಲ್ಲಿ ಆದು ಸಮೂದಾಗಬೇಕಾಗುತ್ತದೆ.

ಶ್ರೀ ಎಂ. ಗಂಗಣ್ಣ.—ಇಲ್ಲಿ ಷೆಡ್ಯೂಲ್-ಟ್ರೈಬ್‌ಗೆ ಸಂಬಂಧಪಟ್ಟಂತೆ ಒಂದು ಆರ್ಡರ್ ಹೊರಡಿಸಿದ್ದಾರೆ.

ಅಧ್ಯಕ್ಷರು.—ಇದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಚೇಂಬರಿಗೆ ಮಾನ್ಯ ಸದಸ್ಯರನ್ನು ಕರೆಸಿ ಕೊಂಡು ಮಾತನಾಡುವುದು ಒಳ್ಳೆಯದು.

ಶ್ರೀ ಎಂ. ಗಂಗಣ್ಣ.—ಮೇಲ್ಮನೆಯ ಸದಸ್ಯರೊಬ್ಬರು ತಾವು ಪೆಡ್ಡೂಲ್ಡ್-ಕ್ಯಾಸ್ಟ್ ಎಂದು ಸರ್ಟಿಫಿಕೇಟ್ ಪಡೆದುಕೊಂಡು ಅದನ್ನು ಆ ಸದನದಲ್ಲಿ ತೆಗೆದಿರಿಸಿದರು. ಅದೇ ರೀತಿ ಇನ್ನೂ ಅನೇಕ ಜನರು ಇಂತಹ ಸರ್ಟಿಫಿಕೇಟ್‌ಗಳನ್ನು ಪಡೆಯುತ್ತಿದ್ದಾರೆ. ಇದನ್ನು ತಪ್ಪಿಸಲು ಈಗ ಪೆಡ್ಡೂಲ್ ಟ್ರೈಬ್‌ಗೆ ಸಂಬಂಧಪಟ್ಟಂತೆ ಏನು ಆರ್ಡರ್ ಹೊರಡಿಸಿದ್ದೀರಿ ಅದೇ ರೀತಿ ಪೆಡ್ಡೂಲ್ ಕ್ಯಾಸ್ಟ್‌ಗೆ ಸಂಬಂಧಪಟ್ಟಂತೆ ಒಂದು ಆರ್ಡರನ್ನು ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ವೆಂಕಟರಮಣ.—ಪೆಡ್ಡೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಡೂಲ್ಡ್ ಟ್ರೈಬ್‌ನವರಾದರೆ ಈಗಿರುವ ನಿಯಮಗಳ ಪ್ರಕಾರ ಸರ್ಟಿಫಿಕೇಟ್‌ನ್ನು ಒದಗಿಸಬೇಕಾಗುತ್ತದೆ. ಬೇರೆ ಜಾತಿಯವರು ಏನಾದರೂ ನಿಯಮಗಳನ್ನು ಉಲ್ಲಂಘನೆ ಮಾಡಿ ಇಂತಹ ಸರ್ಟಿಫಿಕೇಟ್‌ಗಳನ್ನು ಪಡೆದರೆ ಅವರು ಶಿಕ್ಷೆಗೆ ಒಳಪಡುತ್ತಾರೆ. ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುವಾಗ ಕೆಲವೊಂದು ನಿಯಮಗಳನ್ನು ಅನುಸರಿಸ ಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಹೇಳಿದ್ದೇವೆ. ಆದರೆ ಕಾಪಿಯನ್ನು ತಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಜಿ.ಕೆ. ಸುಬ್ಬಯ್ಯ.—ನಮ್ಮ ರಾಜ್ಯ ಸರ್ಕಾರದವರು ಕೆಲವೊಂದು ಜಾತಿಯ ಜನರನ್ನು ಗಿರಿಜನ ಪಂಗಡಕ್ಕೆ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ ಮಾಡಿದ್ದಾರೆಯೇ ಹೇಗೆ ?

ಶ್ರೀ ಪಿ. ವೆಂಕಟರಮಣ.—ಸಧ್ಯಕ್ಕೆ ಯಾವುದನ್ನೂ ನಾವು ಶಿಫಾರಸ್ ಮಾಡಿಲ್ಲ.

30 Bedded Hospital at Bhalki.

563 SRI BHIMANNA KHANDRE (Bhalki).—Will the Minister for Health and Family Welfare be pleased to state.—

(a) whether the Government has sanctioned 30 bedded Hospital at Bhalki;

(b) if so when and what is the follow up action taken by the Government;

(c) The estimated cost of the proposed Government Hospital building at Bhalki;

(d) whether Government have accorded technical and administrative sanction to this 30 bedded Government Hospital;

(e) the amount allotted for the construction of the proposed Government Hospital buliding in previous years and this year budget and total amount spent in this regard;

(f) when this hospital will be completed?

SRI A. K. ABDUL SAMAD (Minister for Health and Family Welfare).—

(a) Yes.

(b) The plans and estimates received from the PWD are under consideration.

(c) About Rs. 14.00 lakhs,